ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) 1980, 1982 ಮತ್ತು 1992ರಲ್ಲಿ ಬೆಳಗಾಂ ಜಿಲ್ಲೆ ಬೈಲಹೊಂಗಲದಲ್ಲಿ ಸಾರ್ವಜನಿಕರಿಂದ ಮನೆಗಳ ಬೇಡಿಕೆಗಾಗಿ ಬೇಡಿಕೆ ಸಮೀಕ್ಷೆ ಅರ್ಜಿಗಳನ್ನು ಕರೆಯಲಾಗಿತ್ತು.

ಆ) ಇಲ್ಲಿ ತೆಗೆದುಕೊಳ್ಳುವ ವಸತಿ ಯೋಜನೆ ಇನ್ನೂ ಪ್ರಾರಂಭಿಕ ಹಂತದಲ್ಲಿದ್ದು ಸಜ್ಜುಗೊಳಿಸಬೇಕಾಗಿದೆ.

ಇ) ಬೈಲಹೊಂಗಲದಲ್ಲಿ ಸರ್ಕಾರಿ ಜಮೀನು ಲಭ್ಯವಿರುವ ಬಗ್ಗೆ ಜಿಲ್ಲಾಧಿಕಾರಿಗಳಲ್ಲಿ ಪತ್ರ ವ್ಯವಹಾರ ನಡೆದಿದೆ. ಜಮೀನನ್ನು ಕರ್ನಾಟಕ ಗೃಹ ಮಂಡಳಿಗೆ ವರ್ಗ ಮಾಡಿಕೊಳ್ಳಲು ಕೋರಿಕೆ ಪತ್ರ ಸಲ್ಲಿಸಿದೆ. ಜಮೀನನ್ನು ಪಡೆದ ನಂತರ ವಸತಿ ಯೋಜನೆಯನ್ನು ರೂಪಿಸಲಾಗುವುದು.

ವಿಷಯ : ಮುಲ್ಕಿ ಕ್ಷೇತ್ರದಲ್ಲಿ ನೆರೆ ಹಾವಳಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 329 (592)

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದರೆ ಮೂಲ್ಕಿ ಕ್ಷೇತ್ರದಲ್ಲಿ ನೆರೆಹಾವಳಿಯಿಂದ ಪೂರ್ಣ ಬಿದ್ದ ಮನೆಗಳೆಷ್ಟು? ಭಾಗಶಃ ಬಿದ್ದ ಮನೆಗಳೆಷ್ಟು? ಬೆಳೆ ಹಾನಿ ಎಷ್ಟಾಗಿದೆ?

ಆ) ಇವರಿಗೆಷ್ಟು ಪರಿಹಾರ ಕೊಡಲಾಗಿದೆ?

ಇ) ಸಾರ್ವಜನಿಕ ಸೊತ್ತುಗಳಾದ ರಸ್ತೆ ಕಟ್ಟಡ; ಸೇತುವೆಗಳಿಗೆ ಆದ ನಷ್ಟವನ್ನು ಯಾವ ರೀತಿಯಲ್ಲಿ ಭರಿಸಲಾಗುವುದು;

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹಾನಿಗೊಂಡ ಮನೆ ಮತ್ತು ಕೃಷಿ ಬೆಳೆಗಳ ವಿವರ ಈ ಕೆಳಕಂಡಂತಿವೆ.

	ಮೂಡಬಿದ್ರೆ	ಮೂಲ್ಕಿ
(1) ಮನೆ ಹಾನಿ :		
(ಅ) ಪೂರ್ತಿ ಬಿದ್ದ ಮನೆಗಳು	14	69.00
(ಆ) ಭಾಗಶಃ ಹಾನಿ ಆದ ಮನೆಗಳು	74	252.00
(2) ಬೆಳೆಹಾನಿ (ಹೆಕ್ಟೇರುಗಳಲ್ಲಿ)	75.16	312.04

ಆ) ನೀಡಲಾದ ಪರಿಹಾರದ ವಿವರ ಈ ಕೆಳಕಂಡಂತಿದೆ.

(1) ಮೂಡಬಿದ್ರೆ ರೂ. 02.23 ಲಕ್ಷಗಳು

(2) ಮೂಲ್ಕಿ ರೂ. 13.36 ಲಕ್ಷಗಳು

ಇ) ಈಗಾಗಲೇ ಸಂಬಂಧಪಟ್ಟ ಇಲಾಖೆಗಳಿಂದ ಅಂದಾಜು ಪಟ್ಟಿಗಳನ್ನು ತಯಾರಿಸಿ ಒಪ್ಪಿಸಲು ಹಾಗೂ ದುರಸ್ತಿ ಕೈಗೊಳ್ಳಲು ತಿಳಿಸಿದೆ. ಹಾನಿಯಾಗಿರುವ

ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿಗಾಗಿ ಜಿಲ್ಲೆಯ ವಿವಿಧ ಅನುಷ್ಠಾನಾಧಿಕಾರಿಗಳಿಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಿದೆ. ಮೂಲ್ಕಿ, ಮೂಡಬಿದ್ರೆ ವಿಧಾನಸಭಾ ಕ್ಷೇತ್ರದಲ್ಲಿ ಅಗತ್ಯವುಳ್ಳ ತುರ್ತು ಕಾಮಗಾರಿಗಳ ಅನುಷ್ಠಾನಗೊಳಿಸಲು ತಿಳಿಸಿದೆ.

	(ರೂ. ಲಕ್ಷಗಳಲ್ಲಿ)
(1) ಲೋಕೋಪಯೋಗಿ ಇಲಾಖೆ.	10.00
(2) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು	9.00
(3) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಉಡುಪಿ	6.00
(4) ಸಣ್ಣ ನೀರಾವರಿ ವಿಭಾಗಕ್ಕೆ	15.00
	40.00

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯ ಬೆರಳಚ್ಚುಗಾರರ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 330(594)

ಶ್ರೀ ಸೋಮಪ್ಪ ಸುವರ್ಣ (ಮೂಡಿಬಿದರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ 1986ರಿಂದ ದಿನಗೂಲಿಯಲ್ಲಿ ಬೆರಳಚ್ಚುಗಾರರಾಗಿಎಷ್ಟು ಜನ ಕೆಲಸ ನಿರ್ವಹಿಸುತ್ತಿದ್ದಾರೆ?

ಆ) ಅವರಿಗೆ ಮಾಸಿಕ ವೇತನ ಎಷ್ಟು ಕೊಡಲಾಗುತ್ತಿದೆ?

ಇ) ಅವರನ್ನು ಖಾಯಂಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಈ) ಅವರನ್ನು ಖಾಯಂ ಯಾವಾಗ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಕಂದಾಯ ಮಂತ್ರಿಗಳು) :

ಅ) 1986ರಿಂದ 21 ಜನ ಬೆರಳಚ್ಚುಗಾರರಾಗಿ ದಿನಗೂಲಿಯಲ್ಲಿ ನೇಮಕವಾಗಿದ್ದು, ಅವರಲ್ಲಿ ಪ್ರಸ್ತುತ 17 ಜನ ಕೆಲಸ ನಿರ್ವಹಿಸುತ್ತಿದ್ದಾರೆ.

ಆ) ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ : 6647 : 90, ದಿ : 21-9-93ರ ತೀರ್ಪಿನ ಪ್ರಕಾರ ಶ್ರೀ ನಿರಂಜನ ಆಚಾರ್ ಮತ್ತು ಶ್ರೀಮತಿ ಎಲಿಜಾ ಸುಕುಮಾರಿ ದಿನಗೂಲಿ ಬೆರಳಚ್ಚುಗಾರರು ಇವರಿಗೆ ಬೆರಳಚ್ಚುಗಾರರ ಹುದ್ದೆಯ ಕನಿಷ್ಟ ವೇತನ ಅಂದರೆ ರೂ. 1040 ನೀಡಲಾಗುತ್ತಿದೆ. ಉಳಿದ ಎಲ್ಲಾ ದಿನಗೂಲಿ ನೌಕರರಿಗೆ ರೂ. 780ರಂತೆ ವೇತನ ನೀಡಲಾಗುತ್ತಿದೆ.

ಇ) ಮೇಲೆ ತಿಳಿಸಿದ 21 ಜನ ಬೆರಳಚ್ಚುಗಾರರನ್ನು 1986 ರಿಂದ ದಿನಗೂಲಿ ಆಧಾರದ ಮೇಲೆ ನೇಮಕ ಮಾಡಲಾಗಿದೆ. ದಿನಗೂಲಿ ನೌಕರರನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದನ್ನು ಸರ್ಕಾರವು ದಿನಾಂಕ 3-7-84ರಿಂದ